ಪಟ್ಟಣದ ಹತ್ತಿರವಿರುವ ಶಕ್ತಿ ನಗರ ಎಂಬ ಸ್ಥಳದಲ್ಲಿ ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮವು ಕೈಗೆತ್ತಿಕೊಂಡಿರುತ್ತದೆ. ಈ ಘಟಕಕ್ಕೆ ಒಟ್ಟು 3 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಇದರಲ್ಲಿ 2 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದ ಬದಲಿ ಇಂಧನ ಮೂಲಗಳ ಸಚಿವಾಲಯ ಅನುದಾನವಾಗಿ ನೀಡುತ್ತಿದೆ. ಹಾಗೂ ಉಳಿದ 1 ಕೋಟಿ ರೂಪಾಯಿಯನ್ನು ಕರ್ನಾಟಕ ವಿದ್ಯುತ್ ನಿಗಮವು ಭರಿಸುತ್ತದೆ ಈ ತೆರನಾಗಿ 30 ಕೋಟಿ ರೂಪಾಯಿ, ಪ್ರತಿ ಮೆಗಾವ್ಯಾಟ್ ಸೌರಶಕ್ತಿ ವಿದ್ಯುತ್ ಉತ್ಪಾದಿಸಲು ಬೇಕಾಗುತ್ತದೆ. ಇಂತಹ ಇನ್ನೊಂದು ಘಟಕವನ್ನು ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಲು ಇದು ದುಬಾರಿ ವೆಚ್ಚದ ಸೂಚಕವಾಗಿದೆ. ಕೇಂದ್ರ ಸರ್ಕಾರವು ಅನುದಾನ ನೀಡಲು ಒಪ್ಪಿಕೊಂಡಾಗ ಮಾತ್ರವೆ ರಾಜ್ಯ ಸರ್ಕಾರದಿಂದ ಬಳ್ಳಾರಿಯಲ್ಲಿ ಮಾರ್ಗದರ್ಶನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.

ವಿಶ್ವ ಬ್ಯಾಂಕಿನ ಸಹಾಯದ ಶಿಕ್ಷಣ ಅಭಿವೃದ್ಧಿ ಯೋಜನೆ.

1773- ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವ ಬ್ಯಾಂಕಿನ ಸಹಾಯದ ಶಿಕ್ಷಣ ಅಭಿವೃದ್ಧಿ ಯೋಜನೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಯ್ಕೆಮಾಡಲಾಗಿದೆಯೇ?

ಆ) ಆಯ್ಕೆ ಆಗಿದ್ದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಯೋಜನೆಗೆ ನಿಗಧಿಯಾದ ಮೊಬಲಗು ಎಷ್ಟು?

ಇ) ಯಾವಾಗಲಿಂದ ಪ್ರಾರಂಭವಾಗುವುದು?

ಈ) ಈ ಯೋಜನೆಗಳಿಂದ ಸಿಗುವ ಸವಲತ್ತುಗಳು ಯಾವುವು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಯೋಜನಾ ಅವಧಿಗೆ (1997-98 ರಿಂದ 200-102ರವರೆಗೆ) ಒಟ್ಟು ಅಂದಾಜು ರೂ. 3402.289 ಲಕ್ಷ

ಇ) ಭಾರತ ಸರ್ಕಾರದಿಂದ ಅನುಮೋದನೆ ಸಿಕ್ಕಿದ ಕೂಡಲೇ (ಬಹುಶಃ ಅಕ್ಟೋಬರ್ 1997 ರಿಂದ)

ಈ) 1. 33 ಶಾಲಾ ಕಟ್ಟಡಗಳನ್ನು ನಿರ್ಮಿಸಿ, ಅವುಗಳಿಗೆ ಕುಡಿಯುವ ನೀರಿನ ಸೌಲಭ್ಯ ಶೌಚಾಲಯಗಳು ಮತ್ತು ವಿದ್ಯುಚ್ಛಕ್ತಿ ಒದಗಿಸುವುದು. 66 ಶಿಕ್ಷಕರನ್ನು ನೇಮಿಸುವುದು.

2. ಪ್ರಸ್ತುತ ಅವಶ್ಯಕವಿದ್ದ ಪ್ರಾಥಮಿಕ ಶಾಲೆಗಳಿಗೆ 109 ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವುದು.

3. 332 ಕಿರಿಯ ಪ್ರಾಥಮಿಕ ಶಾಲೆಗಳನ್ನು 5ನೇ ತರಗತಿಗೆ ಉನ್ನತೀಕರಿಸುವುದು. ಇದರಿಂದ, ವಿದ್ಯಾರ್ಥಿಗಳ ಶಾಲಾ ಬಿಡುವಿಕೆಯ ದರ, ಅದರಲ್ಲಿಯೂ ಮುಖ್ಯವಾಗಿ ಬಾಲಕಿಯರು, ಪ.ಜಾ.:ಪ.ಪಂ. ಹಾಗೂ ಹಿಂದುಳಿದ ವಿಭಾಗದಲ್ಲಿ ಕಡಿಮೆ ಆಗುವುದು..

4. ಶಿಕ್ಷಕರ ಹಾಗೂ ಗ್ರಾಮ ಶಿಕ್ಷಣ ಸಮಿತಿಗಳ ಸದಸ್ಯರ ತರಬೇತಿಗಾಗಿ 8 ಕ್ಷೇತ್ರ ಸಂಪನ್ಮೂಲ ಕೇಂದ್ರಗಳನ್ನು ನಿರ್ಮಿಸುವುದು.

5. ಪ್ರತಿ ತಿಂಗಳೂ ಶಿಕ್ಷಕರು ಸೇರಿ ಶೈಕ್ಷಣಿಕ ಸಮಸ್ಯೆಗಳು ಹಾಗೂ ಶಿಕ್ಷಣ ಮಟ್ಟವನ್ನು ಉನ್ನತಪಡಿಸಲು ಪರಸ್ಪರ ಚರ್ಚೆಗೆ ಅನುಕೂಲಮಾಡಲು 135 ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು ನಿರ್ಮಿಸುವುದು.

6. 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಚಟುವಟಿಕೆ ಆಧಾರಿತ ಅಭ್ಯಾಸವು ಪುಸ್ತಕಗಳನ್ನು ಒದಗಿಸುವುದು.

7. ಶಿಕ್ಷಕರಿಗೆ ಬೋಧನಾ ಕೌಶಲ್ಯಗಳನ್ನು ಉನ್ನತೆ ಪಡಿಸಲು ಕೈಪಿಡಿಗಳನ್ನು ಒದಗಿಸುವುದು.

8. ಯೋಜನಾ ಅವಧಿಯಲ್ಲಿ ಶಿಕ್ಷಕರಿಗೆ ಎರಡು ಬಾರಿ ತರಬೇತಿ ನೀಡುವುದು.

9. ಯೋಜನಾ ಅವಧಿಯಲ್ಲಿ ಶಾಲಾ ಮುಖ್ಯ ಶಿಕ್ಷಕರಿಗೆ ಒಂದು ಬಾರಿ ತರಬೇತಿ ನೀಡುವುದು.

10. ಶಾಲೆಯ ಭೌತಿಕ ಸವಲತ್ತುಗಳನ್ನು ಉನ್ನತ ಪಡಿಸಲು ಪ್ರತಿ ಸರ್ಕಾರಿ ಶಾಲೆಗೆ ಪ್ರತಿ ವರ್ಷವೂ ರೂ. 2000-00 ದಂತೆ ಶಾಲಾ ಅನುದಾನ ನೀಡುವುದು.

11. ಶಿಕ್ಷಕರು ತಮ್ಮ ಬೋಧನೆಯಲ್ಲಿ ಅವಶ್ಯಕವಾಗಿ ಬೇಕಾಗುವ ಕಲಿಕಾ ಸಾಮಗ್ರಿಗಳನ್ನು ತಯಾರಿಸಿ ಕೊಳ್ಳಲು ಪ್ರತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಾರ್ಷಿಕ ರೂ. 500 -00 ಅನುದಾನ ನೀಡುವುದು.

12. ಕಲಾ ಜಾಥ, ಚಿನ್ನರ ಮೇಳ, ಗ್ರಾಮ ಶಿಕ್ಷಣ ಸಮಿತಿ ಮೇಳ ಮತ್ತು ಸೂಕ್ಷ್ಮಯೋಜನೆಗಳ ಮೂಲಕ ಸಾಮೂಹಿಕ ಜನಜಾಗೃತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು.

ಉಚಿತ ಪಠ್ಯ ಪುಸ್ತಕ ಹಂಚಿಕೆಯಲ್ಲಿ ದುರುಪಯೋಗ.

1774 - ಶ್ರೀ ಹೆಚ್.ಡಿ. ಬಸವರಾಜ (ವಿರಾಜಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95, 1995-96,1996-97ರ ಸಾಲಿನಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಮಕ್ಕಳ ಸಲುವಾಗಿ ಉಚಿತ ಪಠ್ಯಪುಸ್ತಕಕ್ಕಾಗಿ ಮತ್ತು ಉಚಿತ ಶಾಲಾ ಸಮವಸ್ತ್ರಕ್ಕಾಗಿ ಎಷ್ಟು ವೆಚ್ಚ ಮಾಡಲಾಗಿದೆ. ಅದರಲ್ಲಿ ಜಿಲ್ಲಾವಾರು ಎಷ್ಟು ವೆಚ್ಚವಾಗಿರುತ್ತದೆ (ಅಂಕಿ ಅಂಶ ನೀಡುವುದು)